(ಅ) ಗುಲ್ಬರ್ಗಾ ಜಿಲ್ಲೆಯ ಶಹಾಪುರ ಮತ್ತು ಸುರಪುರ ತಾಲ್ಲೂಕಿನಲ್ಲಿರುವ ತಾಂಡಾಗಳಿಗೆ ವಿದ್ಯುತ್ ಒದಗಿಸಲು ಸರ್ಕಾರವು ಕ್ರಮ ಕೈಗೊಂಡಿದೆಯೇ.

(ಆ) ಈ ವರ್ಷವೇ ಈ ಎಲ್ಲಾ ತಾಂಡಾಗಳಿಗೆ (ಸುರಪುರ ಮತ್ತು ಶಹಾಪುರ) ವಿದ್ಯುತ್ ಒದಗಿಸಲಾಗುವುದೇ ?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ರಾಜ್ಯ ಮಂತ್ರಿಗಳು).—

(ಅ) ಮಂಡಳಿಯು ಕ್ರಮ ಕೈಗೊಂಡಿದೆ.

(ಆ) ಇಲ್ಲ. ೧೯೮೮-೮೯ರಲ್ಲಿ ೭ ತಾಂಡಾಗಳ ವಿದ್ಯುದ್ದೀಕರಣದ ಗುರಿಯಿದೆ.

ಶ್ರೀ ಶಿವಶೆಂಖರಪ್ಪಗೌಡ ಶಿರವಾಳ.—ಮಾನ್ಯ ಅಧ್ಯಕ್ಷರೆ. ಮಾನ್ಯ ಮಂತ್ರಿಗಳು ೧೯೮೮-೮೯ರಲ್ಲಿ ಸುರಪುರ ಮತ್ತು ಶಹಾಪುರ ತಾಲ್ಲೂಕಿನಲ್ಲಿರುವ ಏಳು ತಾಂಡ-ಳಿಗೆ ವಿದ್ಯುದ್ದೀಕರಣವನ್ನು ಮಾಡುವ ಗುರಿ ಇದೆಯೆಂದು ಹೇಳಿದ್ದಾರೆ. ಆದರೆ ಸುಮಾರು ತಾಂಡಗಳು ಆ ತಾಲ್ಲೂಕುಗಳಲ್ಲಿ ಇವೆ. ಕಳೆದ ೪ ವರ್ಷಗಳಿಂದ ಹ್ಯಾಮ್‌ಲೆಟ್‌ಗಳಿಂದು ತಿಳಿದುಕೊಂಡು ಕರೆಂಟ್ ಕೊಡದೆ ಹೋದರೆ ಆಲ್ಲಿನ ಜನರಿಗೆ ಬಹಳ ಅನ್ಯಾಯವಾಗುತ್ತದೆ. ಆದ್ದರಿಂದ ಇದೇ ವರ್ಷ ಎಲ್ಲ ತಾಂಡಗಳಿಗೂ ವಿದ್ಯುತ್ ಕೊಡುವ ವ್ಯವಸ್ಥೆ ಯನ್ನು ಮಾಡುತ್ತೀರಾ ?

ಶ್ರೀ ಲಕ್ಷ್ಮೀನರಸಿಂಹಯ್ಯ.—ಶಹಾಪುರ ಮತ್ತು ಸುರಪುರ ತಾಲ್ಲೂಕಿನಲ್ಲಿ ೧೩೩ ಜನ ಹರಿಜನ ಬಸತಿಗಳು ಇವೆ. ಈ ಬಸತಿಗಳಿಗೆ ಗ್ರಾಮೀಣ ವಿದ್ಯುತ್ತೀಕರಣಯೋಜನೆಗಳಲ್ಲಿ ವಿದ್ಯುತ್ ವ್ಯವಸ್ಥೆ ಮಾಡಲು, ಮಂಜೂರಾತಿ ಸಿಕ್ಕಿದೆ. ಎರಡು ವರ್ಷಗಳ ಅವಧಿಯಲ್ಲಿ ಎಲ್ಲ ತಾಂಡಗಳಿಗೂ ವಿದ್ಯುತ್ ಒದಗಿಸಲಾಗುವುದು. ೧೯೮೮-೮೯ನೇ ಇಸವಿಯ ಕೊನೆಯೊಳಗೆ ವಿದ್ಯುತ್ ಪೂರೈಸಲಾಗುವುದು.

ಶ್ರೀ ಶಿವಶೆಂಖರಪ್ಪಗೌಡ ಶಿರವಾಳ.—ಏಳು ತಾಂಡಗಳಿಗೆ ಎಂದು ಉತ್ತರ ಕೊಟ್ಟಿದ್ದೀರಿ, ೧೯೮೮-೮೯ರಲ್ಲಿ ೧೩೩ ತಾಂಡಗಳಿಗೆ ವಿದ್ಯುತ್ ಒದಗಿಸುವುದಕ್ಕೆ ಕಷ್ಟವಾಗುತ್ತದೆ. ಆದ್ದರಿಂದ ಹಂತಹಂತವಾಗಿ ವಿದ್ಯುತ್ತನ್ನು ಒದಗಿಸುವ ವ್ಯವಸ್ಥೆಯನ್ನು ಮಾಡುತ್ತೀರಾ ?

ಶ್ರೀ ಲಕ್ಷ್ಮೀನರಸಿಂಹಯ್ಯ. —ಏಳು ತಾಂಡಗಳಿಗೆ ಮಂಡಳಿಯು ವತಿಯಿಂದ ಮಾಡಲಾಗುವುದು. ಉಳಿದದ್ದನ್ನು ಆರ್.ಇ.ಸಿ. ಮೂಲಕ ಮಾಡಲಾಗುವುದು.

ಗಂಧದ ಎಣ್ಣೆ ತಯಾರಿಸುವ ಕಾರ್ಖಾನೆಗಳ ಬಗ್ಗೆ

೧೮೬೪. ಶ್ರೀ ಪಿ.ಎಂ. ಚಿಕ್ಕಬೋರಯ್ಯ, (ಚಾಮರಾಜ).—ಮಾನ್ಯ ಭಾರಿ ಹಾಗೂ ಮಧ್ಯಮ ಕೈಗಾರಿಕೆಗಳು ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ರಾಜ್ಯದಲ್ಲಿ ಶ್ರೀಗಂಧದ ಎಣ್ಣೆ ತಯಾರಿಸುವ ಕಾರ್ಖಾನೆಗಳು ಎಷ್ಟು ? ಎಲ್ಲೆಲ್ಲಿವೆ ? ಅವುಗಳ ಕಾರ್ಖಾನೆಗಳು ಬಂಡವಾಳ ಹಾಗೂ ಉತ್ಪಾದನಾ (ತೈಲ ಇತ್ಯಾದಿ) ಲಾಭದಾಯಕ ಪ್ರಮಾಣ ಗಳೆಷ್ಟು ?

(ಆ) ಮೈಸೂರು ನಗರದಲ್ಲಿರುವ ಕಾರ್ಖಾನೆಯಲ್ಲಿ ಕಾರ್ಯಸ್ಥಗಿತಗೊಳ್ಳಲು ಕಾರಣವೇನು ? ಶಿವಮೊಗ್ಗದಲ್ಲಿರುವ ಕಾರ್ಖಾನೆಗೆ ಉತ್ತೇಜನ ನೀಡಲು ಕಾರಣವೇನು ?

(ಇ) ಮೈಸೂರು ಕಾರ್ಖಾನೆ ಸ್ಥಗಿತಗೊಂಡಿರುವದರಿಂದ ಬೀದಿ ಪಾಲಾಗುತ್ತಿರುವ ೨೯೩ ಕುಟುಂಬಗಳಿಗೆ ಬದಲಿ ಉದ್ಯೋಗ ದೊರಕಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

(ಈ) ಪಾಗಿದ್ದಲ್ಲಿ ಈ ಕಾರ್ಖಾನೆಗಳನ್ನು ಪುನರುಜ್ಜೀವನಗೊಳಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೆ ? ಆದಕ್ಕಾಗಿಂಪ ಆರ್ಥಿಕ ಅಂದಾಜು ಎಷ್ಟು ?

ಶ್ರೀ ಜೆ.ಹೆಚ್. ಪಟೀಲ್ (ಭಾರೀ ಹಾಗೂ ಮಧ್ಯಮ ಕೈಗಾರಿಕೆ ಮತ್ತು ವಿದ್ಯುತ್ ಸಚಿವರು).— (ಅ) ರಾಜ್ಯದಲ್ಲಿ ಶ್ರೀ ಗಂಧದ ಎಣ್ಣೆ ತಯಾರಿಸುವ ಕಾರ್ಖಾನೆಗಳು ಎರಡು. ಈ ಕಾರ್ಖಾನೆಗಳು ಮೈಸೂರು ಮತ್ತು ಶಿವಮೊಗ್ಗದಲ್ಲಿದೆ. ಈ ಕಾರ್ಖಾನೆಗಳ ಬಂಡವಾಳ, ಉತ್ಪಾದನೆ ಹಾಗೂ ಲಾಭಾಂಶಗಳು ಈ ಕೆಳಕಂಡಂತಿವೆ.

ಮೈಸೂರು

ವರ್ಷ	ಬಂಡವಾಳ (ಲಕ್ಷ ರೂ.ಗಳಲ್ಲಿ)	ಉತ್ಪಾದನಾ (ಕೆ.ಜಿ.ಗಳಲ್ಲಿ)	ಲಾಭಾಂಶ (ರೂ.ಲಕ್ಷಗಳಲ್ಲಿ)
೧೯೮೫-೮೬	೧೪೧.೬೩	೨೭,೬೪೦	೩.೬೧
೧೯೮೬-೮೭	೧೪೧.೬೩	೧೭,೪೯೧	೭.೪೪
೧೯೮೭-೮೮ (ತಾತ್ಕಾಲಿಕ)	೧೪೧.೬೩	೬,೦೨೫	— ೫೩.೧೧

(ಶಿವಮೊಗ್ಗ)

ವರ್ಷ	ಬಂಡವಾಳ (ಲಕ್ಷ ರೂ.ಗಳಲ್ಲಿ)	ಉತ್ಪಾದನಾ (ಕೆ.ಜಿ.ಗಳಲ್ಲಿ)	ಲಾಭಾಂಶ (ರೂ.ಲಕ್ಷಗಳಲ್ಲಿ)
೧೯೮೫-೮೬	೮೪.೧೦	೨೨,೫೧೮	೪೪.೮೧
೧೯೮೬-೮೭	೮೪.೧೦	೧೭,೫೩	೫೭.೦೪
೧೯೮೭-೮೮ (ತಾತ್ಕಾಲಿಕ)	೮೪.೧೦	೫,೭೨೧	೨೦.೬೫

(ಆ) ಗಂಧದ ಮರದ ಸರಬರಾಜು ಇಲ್ಲದ್ದರಿಂದ ಎರಡೂ ಕಾರ್ಖಾನೆಗಳಲ್ಲಿ ಕಾರ್ಯ ಸ್ಥಗಿತ ಗೊಂಡಿರುತ್ತದೆ.

(ಇ) ಮೈಸೂರು ಕಾರ್ಖಾನೆಯ ಉತ್ಪಾದನೆಯು ಸ್ಥಗಿತಗೊಂಡಿದ್ದರೂ ಕೂಡಾ ಕಾರ್ಮಿಕರನ್ನು ಕೆಲಸದಿಂದ ವಜಾ ಮಾಡಿಲ್ಲ. ಅವರಿಗೆ ಸಂಬಳ ಹಾಗೂ ಇತರ ಸೌಲಭ್ಯಗಳನ್ನು ಮಾಮೂಲಿನಂತೆ ಕೊಡುತ್ತಿದ್ದೇವೆ. ಆದುದರಿಂದ ಅವರಿಗೆ ಬೇರೆ ಉದ್ಯೋಗ ಕಲಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

(ಈ) ಮೈಸೂರು ಕಾರ್ಖಾನೆಯ ಪುನರುಜ್ಜೀವನದ ಯೋಜನೆ ಹಾಗೂ ಶಿವಮೊಗ್ಗ ಕಾರ್ಖಾನೆಯ ಪುನರುಜ್ಜೀವನದ ಯೋಜನೆ ಸರ್ಕಾರದವರ ಕಡೆಯಿಂದ 'ಎಡ್‌ಮಿನಿಸ್ಟರ್ಡ್' ಆದರೆ ನಿಗಧಿತ ಬೆಲೆ ಪ್ರಕಾರ ಕೆ.ಎಸ್.ಡಿ.ಎಲ್.ರವರಿಗೆ ಗಂಧದ ಮರ ಕೊಡುವ ವಿಚಾರವು ಪರಿಶೀಲನೆಯಲ್ಲಿದೆ.

ಶ್ರೀ ಪಿ. ಎಂ. ಚಿಕ್ಕಬೋರಯ್ಯ.—ಸ್ವಾಮಿ, ೧೯೮೫-೮೬ನೇ ಸಾಲಿನಲ್ಲಿ ಮೈಸೂರು ಗಂಧದ ಎಣ್ಣೆ ಕಾರ್ಖಾನೆಯಲ್ಲಿ ಉತ್ಪಾದನೆಯಾದುದು ೨೭. ೬೪೦ ಕೆ.ಜಿ. ಗಂಧದ ಎಣ್ಣೆ ಎಂದು ಹೇಳಿದ್ದೀರಿ. ಅದರ ಮಾರನೇ ವರ್ಷಕ್ಕೇ ಅಂದರೆ ೧೯೮೬-೮೭ನೇ ಸಾಲಿನಲ್ಲಿ ೧೭,೪೯೧ ಕೆ.ಜಿ. ಉತ್ಪತ್ತಿಯಾಗಿದೆ. ಅದರ ಮಾರನೇ ವರ್ಷ ಅಂದರೆ ೧೯೮೭-೮೮ರಲ್ಲಿ ೬,೦೨೫ ಕೆ.ಜಿ.ಗೆ ಇಳಿದಿದೆ. ಈ ರೀತಿ ಪ್ರತಿವರ್ಷವೂ ಇಳಿಮುಖವಾಗಿರುವುದಕ್ಕೆ ಕಾರಣ ಏನು ?

ಇನ್ನು ಎರಡನೆಯದಾಗಿ, ೧೯೬೭-೬೮ನೇ ಸಾಲಿನಲ್ಲಿ ೬.೦೨ಕೆ ಕೆ.ಜಿ. ಶ್ರೀಗಂಧದ ಎಣ್ಣೆಯನ್ನು ಮೈಸೂರು ಗಂಧದ ಎಣ್ಣೆ ಕಾರ್ಖಾನೆಯಲ್ಲಿ ತಯಾರು ಮಾಡಿದ್ದಾರೆ. ಇಷ್ಟು ತಯಾರು ಮಾಡಿದ್ದರೂ ಆಗಿರತಕ್ಕ ನಷ್ಟ ೫೩.೧೧ ಲಕ್ಷ ರೂಪಾಯಿ ಎಂದು ನಮೂದಿಸಿದ್ದೀರಿ. ಇದೇ ಸಂದರ್ಭದಲ್ಲಿ ಅಂದರೆ ೧೯೬೭-೬೮ನೇ ಸಾಲಿನಲ್ಲಿ ಶಿವಮೊಗ್ಗ ಕಾರ್ಖಾನೆಯಲ್ಲಿ ೫,೭೨೧ ಕೆ.ಜಿ. ಶ್ರೀಗಂಧದ ಎಣ್ಣೆ ತಯಾರಾಗಿದೆ. ಅಲ್ಲಿ ಬಂದಿರತಕ್ಕ ಲಾಭ ೨೮.೭೫ ಲಕ್ಷ ರೂಪಾಯಿಗಳು ಎಂದು ನಮೂದಿಸಿದ್ದೀರಿ. ಈ ರೀತಿ ಮೈಸೂರು ಕಾರ್ಖಾನೆಯಲ್ಲಿ ೬.೦೨ಕೆ ಕೆ.ಜಿ. ಉತ್ಪಾದನೆಯಾಗಿ ೫೩.೧೧ ಲಕ್ಷ ನಷ್ಟವಾಗಿರುವುದಕ್ಕೂ ಮತ್ತು ಶಿವಮೊಗ್ಗ ಕಾರ್ಖಾನೆಯಲ್ಲಿ ೫.೭೨ ಕೆ. ಜಿ. ಎಣ್ಣೆ ಉತ್ಪಾದನೆಯಾಗಿ ೨೮.೭೫ ಲಕ್ಷ ರೂಪಾಯಿ ಲಾಭ ಬರುವುದಕ್ಕೂ ಕಾರಣ ಏನು ? ಅಲ್ಲಿ ಲಾಭ, ಇಲ್ಲಿ ನಷ್ಟ. ಇದಕ್ಕೆ ಕಾರಣ ಏನು ?

ಇನ್ನು ಮೂರನೆಯದಾಗಿ ಈ ಕಾರ್ಖಾನೆಗೆ ಅವಶ್ಯಕವಾಗಿ ಬೇಕಾದ ಪಸ್ತು ಎಂದರೆ, ಬಲ್ಲಿದ್ದಲು. ತಾ॥ ೧೮-೧೦-೬೮ರಂದು ೬೪೫೯ ಟನ್ ಕಲ್ಲಿದ್ದಲು ಈ ಮೈಸೂರು ಕಾರ್ಖಾನೆಯಲ್ಲಿತ್ತು. ಇದರಲ್ಲಿ ತಾ॥ ೪-೩-೬೮ರವರೆಗೆ ೨.೫೯೦ ಟನ್ ಕಲ್ಲಿದ್ದಲನ್ನು ಬೇರೆಗಳಿಗೆ ರವಾನಿಸಲಾಗಿದೆ. ಈ ರೀತಿ ರವಾನಿಸಲು ಕಾರಣ ಏನು ? ಇನ್ನು ಈ ಕಾರ್ಖಾನೆಗೆ ಬೇಕಾದ ಅಗತ್ಯ ವಸ್ತು ಇಲ್ಲವೆ ಎಂಬುದನ್ನು ನಾನು ಕೇಳಬಯಸುತ್ತೇನೆ.

ಶ್ರೀ ಜಿ ಎಚ್ ಪಟೀಲ್.—ಮಾನ್ಯ ಅಧ್ಯಕ್ಷರೇ, ನಾನು ಕೊಟ್ಟಿರುವ ಉತ್ತರದಲ್ಲಿ ಮೈಸೂರು ಕಾರ್ಖಾನೆಯಲ್ಲಿ ೬.೦೬೦ ಕೆ.ಜಿ. ಉತ್ಪಾದನೆ ಆಗಿದ್ದರೆ ೫೩ ಲಕ್ಷ ರೂಪಾಯಿಗಳು ಶೇಖಾಂಶ ಒಟ್ಟು ಕಾರ್ಖಾನೆಗು ಅಕೌಂಟಿನಲ್ಲಿ ಆಗಿರುವುದು. ಇದು ಒಂದರಿಂದಲೇ ಆಲ್ಲ, ಇಲ್ಲಿ ಗಂಧದ ಕಡ್ಡಿಯನ್ನೂ ತಯಾರು ಮಾಡುವುದು ಇದೆ ಮತ್ತೆ ಬೇರೆ ಬೇರೆ ಕೆಲಸಗಳನ್ನು ಮಾಡುವುದು ಇದೆ. ಆದ್ದರಿಂದ ಇಲ್ಲಿ ಗಂಧದ ಎಣ್ಣೆ ಕಾರ್ಖಾನೆಯಲ್ಲಿ ಕಾರಣಾಂತರದಿಂದ ಆಲ್ಲ ಬೇರೆ ಕಾರಣಗಳಿಂದಲೂ ಲುಕ್ಸಾನಾಗುತ್ತದೆ. ಶಿವಮೊಗ್ಗದಲ್ಲಿ ೫ ಸಾವಿರ ಕೆ.ಜಿ. ಉತ್ಪಾದನೆಯಾದರೆ ಇಲ್ಲಿ ಏನಾಗಿದೆ ಎಂದರೆ ಎರಡು ಮಿಲ್‌ಗಳ ಕೆಪಾಸಿಟಿ ಬೇರೆ ಬೇರೆ ಇದೆ. ಒಟ್ಟು ೧೧೪ ಟನ್ ಕೆಪಾಸಿಟಿ ಇರುವ ಇರುವ ಕಪೆ ೮೦-೯೦ ಟನ್ ಪರ್‌ಡೇ ನೆವಾಡಿದಲೇ ಏನಾಗುತ್ತದೆಂದರೆ, ಮೈಸೂರಿನಲ್ಲಿರುವ ಕಾರ್ಖಾನೆ ಕೆಪಾಸಿಟಿಗೆ ೨೫ ಪರ್ಸೆಂಟ್ ಇದ್ದಲ್ಲಿ ಅಂದರೆ ಕೆಪಾಸಿಟಿ ಕೆಲಸ ಮಾಡಿದರೆ ಲುಕ್ಸಾನಾಗುತ್ತದೆ. ಮತ್ತೆ ಶಿವಮೊಗ್ಗದಲ್ಲಿ ಕಡಿಮೆ ಪರ್ಸೆಂಟ್ ಇದ್ದರೆ, ಉತ್ಪಾದನೆ ಅಷ್ಟೇ ಹುಟ್ಟಿಕ್ಕೆ ಬಂದರೆ ಲುಕ್ಸಾನು ಕಾಣುವುದಿಲ್ಲ. ಮೇಲಾಗಿ ಈ ಲುಕ್ಸಾನಾಗು ತ್ತಿರುವುದಕ್ಕೆ ಅಂತರರಾಷ್ಟ್ರೀಯ ಕಾರಣಗಳಿವೆ. ಈ ಕಾರ್ಖಾನೆ ಏನು ಇದೆ ಇದಕ್ಕೆ ಬೇಕಾದ ಗಂಧದ ಮರ ಸಿಕ್ಕುವುದಿಲ್ಲ ಮತ್ತು ಬೆಲೆಯೂ ಕೂಡ ಜಾಸ್ತಿಯಾಗಿದೆ. ಹಿಂದೆ ಒಂದು ಟನ್ ಗಂಧದ ಬೆಲೆ ೬೫ ಸಾವಿರ ರೂಪಾಯಿಗಳು ಇದ್ದುದು ಈಗ ೧ ಲಕ್ಷ ೬೫ ಸಾವಿರ ರೂಪಾಯಿಗಳವರೆಗೆ ಹೆಚ್ಚಿದೆ. ಪಕ್ಕದ ರಾಜ್ಯವಾದ ತಮಿಳುನಾಡಿನವರ ಹರಾಜಿನಿಂದಾಗಿ ಅಷ್ಟು ಎತ್ತರಕ್ಕೆ ಹೋಗಿದೆ. ಆಡ್ಮಿನಿಸ್ಟ್ರೇಟಿವ್ ಪ್ರೈಸ್ ಅಂದರೆ ಈ ಕಾರ್ಖಾನೆಗಳು ಬದುಕುವುದಕ್ಕೆ ಸಾಧ್ಯವಾಗುವಷ್ಟರಲ್ಲಿ ಆ ಬೆಲೆಗೆ ಗಂಧದ ಮರವನ್ನು ಕೊಟ್ಟರೆ ಅವು ಬದುಕುತ್ತವೆ. ೧ ಲಕ್ಷದಳಿಗೆ ಸಾವಿರ ರೂಪಾಯಿಗೆ ತೆಗೆದುಕೊಂಡು ಈಗ ಕೊಡುವ ಬೆಲೆಗೆ ನಾವು ಮಾರಾಟ ಮಾಡುವುದಕ್ಕಾಗುವುದಿಲ್ಲ ಮೇಲಾಗಿ ನಾವು ಫ್ರಾನ್ಸ್ ದೇಶಕ್ಕೆ ಗಂಧದ ಎಣ್ಣೆಯನ್ನು ರಫ್ತುಮಾಡುತ್ತಿದ್ದು ಅವರು ಗಂಧದ ಎಣ್ಣೆಗೆ ಬೇರೆ ಸಿಂಥೆಟಿಕ್ ಸಬ್‌ಸ್ಟಿಟ್ಯೂಟ್ ಮಾಡುತ್ತಿರುವುದರಿಂದ ನಮಗೆ ಲುಕ್ಸಾನು ಜಾಸ್ತಿಯಾಗಿದೆ.

ಶ್ರೀ ಪಿ. ಎಂ. ಚಿಕ್ಕಬೋರಯ್ಯ.—ಅರಣ್ಯದಿಂದ ಗಂಧದ ಮರಗಳು ದೊರಕುತ್ತಿಲ್ಲವೆಂದು ಮಾನ್ಯ ಮಂತ್ರಿಗಳು ಹೇಳಿದರು. ಈಗ ಸುಮಾರು ೧೨ ಕೋಟಿ ರೂಪಾಯಿಗಳ ಗಂಧದ ಮರಗಳು ಅರಣ್ಯ ಇಲಾಖೆಯಲ್ಲಿ ಇದೆ ಎಂದು ಹೇಳಿದರೆ ತಪ್ಪಾಗುತ್ತದೆಯೇ ? ಅದೇ ರೀತಿ ತಮಿಳುನಾಡಿನಲ್ಲಿ ಹರಾಜಿನಲ್ಲಿ ಗಂಧದ ಕಾರ್ಖಾನೆಗೆ ೧೯೬೬ರಲ್ಲಿ ಕೊಂಡಂಥ ಗಂಧದ ಮರ ಸುಮಾರು ೪೨ ಟನ್, ಅದಕ್ಕೆ ೫ ಲಕ್ಷ ರೂಪಾಯಿ ಬೆಲೆ ನಿಗದಿ ಮಾಡಿ ಕೊಂಡುಕೊಂಡರು. ೫ ಲಕ್ಷ ರೂಪಾಯಿನದಕ್ಕೆ ಇ.ಎಂ.ಡಿ. ಕೊಟ್ಟಿದ್ದಾರೆ. ೧೯೬೭ನೇ ಇಸವಿಯಲ್ಲಿ ಕೊಂಡದ್ದು ಇಲ್ಲಿಯವರೆಗೆ ಆ ಗಂಧದ ಮರಗಳನ್ನು ತರಲಿಕ್ಕೆ ಏರ್ಪಾಡು ಮಾಡಲಿಲ್ಲ. ಈ ಕಾರಣದಿಂದಾಗಿ ಅವರು ಗ್ರೌಂಡ್ ರೆಂಟ್ ಪಾತಿದ್ದಾರೆ. ಇದಕ್ಕೂ ಕೂಡ ಲಕ್ಷಾಂತರ ರೂಪಾಯಿಗಳಾಗಿದೆ. ಇದಕ್ಕೆ ಏನು ಕಾರಣವೆಂದು ಕೇಳುತ್ತೇನೆ ?

ಶ್ರೀ ಜೆ ಹೆಚ್. ಪಟೇಲ್.—ನನ್ನ ರಾಜ್ಯದ ಅರಣ್ಯ ಇಲಾಖೆಯಿಂದ ನಮಗೆ ಸಿಗುತ್ತಿರುವ ಗಂಧಕ್ಕೆ ಈಗ ಟನ್ ಒಂದಕ್ಕೆ ೬೫ ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದೇವೆ. ನಾವು ಹೂಾಟ ಮಾಡುವ ಗಂಧದ ಎಣ್ಣೆಗೆ ಇದು ಸರಿಹೋಗುತ್ತಿದೆ. ನಮಗೆ ಸಾಷ್ಟು ನಮ್ಮ ಅರಣ್ಯದಲ್ಲಿಯೇ ಗಂಧದ ಮರಗಳು ದೊರಕುತ್ತಿದ್ದರೆ ತಮಿಳುನಾಡಿನ ಹರಾಜಿಗೆ ಹೋಗಬೇಕಾದ ಅವಶ್ಯಕತೆ ಇರಲಿಲ್ಲ. ಮೂರು ಸದಸ್ಯರು ಹೇಳಿದಂತೆ ಹರಾಜಿನಲ್ಲಿ ಭಾಗವಹಿಸಿ ಮೈಸೂರು ಕಾರ್ಖಾನೆಗೆ ತರುತ್ತಿರುವುದರಿಂದ ಲಾಕ್ಸನು ಜೆಚ್ಚಾಗಿ ಕಾಣುತ್ತಿದೆ. ಆದ್ದರಿಂದ ಅರಣ್ಯ ಮಂತ್ರಿಗಳನ್ನು ಮತ್ತು ಉನ್ನತ ಅಧಿಕಾರಿಗಳನ್ನು ಕರೆದು ಚರ್ಚೆಮಾಡಿ ನಮ್ಮದೇ ಆದ ಒಂದು ಬೆಲೆಯನ್ನು ನಿಗದಿಮಾಡಿ ಆ ಬೆಲೆಗೆ ಕೊಡಬೇಕೆಂದು ವಿಚಾರ ಮಾಡುತ್ತಿದ್ದೇವೆ. ಮತ್ತೆ ಅರಣ್ಯ ಇಲಾಖೆಯವರು ಅವರದೇ ಆದ ಒಂದು ವಾದವೂ ಇದೆ. ಒಂದು ಲಕ್ಷದ ಮೇಲೆ ಬೆಲೆ ಸಿಕ್ಕುವಾಗ ನಾವು ಎಷ್ಟಕ್ಕೆ ಕಡಿಮೆ ಬೆಲೆಗೆ ಕೊಡಬೇಕು ಎನ್ನುವ ಫಿನ್ಯಾಫಿಪ್ರಾಯವು ಇದೆ. ಇದನ್ನು ಬಗೆಹರಿಸಿ ನಮ್ಮ ಸ್ಯಾಂಡಲ್ ವುಡ್‌ನ್ನು ನಾವೇ ಉಪಯೋಗ ಮಾಡಿದರೆ ನಮಗೆ ಅನುಕೂಲವಾಗುತ್ತದೆ ಮತ್ತು ಕಾರ್ಖಾನೆಯನ್ನು ಜೀವಂತ ಮಾಡಲು ಸಾಧ್ಯವಾಗುತ್ತದೆಂದು ಅಭಿಪ್ರಾಯ ಪಟ್ಟಿದ್ದೇನೆ.

ಚಿಕ್ಕಮಗಳೂರು ಅರಣ್ಯ ವಿಭಾಗದಲ್ಲಿ ವೈರ್‌ಲೆಸ್ ಸೆಟ್‌ಗಳನ್ನು ಅಳವಡಿಸುವುದು

೧೯೭೪. ಶ್ರೀ ಐ. ಬಿ. ರಂಕರ್ (ಚಿಕ್ಕಮಗಳೂರು).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಚಿಕ್ಕಮಗಳೂರು ಅರಣ್ಯ ವಿಭಾಗಕ್ಕೆ ಸರ್ಕಾರದ ಅನುಮತಿ ಇಲ್ಲದೆ ವೈರ್‌ಲೆಸ್ ಅಳವಡಿಸಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮವೇನು ?

ಇ) ಸದರಿ ವೈರ್‌ಲೆಸ್ ಉಪಕರಣವು ಸಮರ್ಪಕವಾಗಿ ಕೆಲಸ ಮಾಡುತ್ತಿದೆಯೇ ಮತ್ತು ಅದಕ್ಕೆ ಏರ್ಪಾದ ಹಣವೆಷ್ಟು ? (ವಿವರ ನೀಡುವುದು).

ಈ) ಈ ಉಪಕರಣಗಳನ್ನು ಅಳವಡಿಸಿರುವುದರಿಂದ ಸರ್ಕಾರಕ್ಕಾಗಿರುವ ಉಪಯೋಗ ಲಾಭ ಮತ್ತು ನಷ್ಟಗಳೇನು ?

ಶ್ರೀ ಜಿ. ಎಸ್. ಜಾಗಲಕೋಟಿ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ಇಡೀ ಕರ್ನಾಟಕ ರಾಜ್ಯ ಅರಣ್ಯ ಇಲಾಖೆಗೆ ಈಗಿರುವ ನಿಸ್ತಂತು ಉಪಕರಣಗಳನ್ನು ವಿಸ್ತರಿಸಲು ಈಗಾಗಲೇ ಸರ್ಕಾರವು ನಿರ್ಧರಿಸಿದ್ದು ಈ ಬಗ್ಗೆ ಮೆ. ಭಾರತ್ ಎಲೆಕ್ಟ್ರಾನಿಕ್ ನಿಗಮ ಮತ್ತು ಮೆ. ಜಿ. ಎಲ್. ರಿಸರ್ಚ್‌ರವರಿಂದ ಮೊಹರು ಕೆಲಸ ಮಾಡಿಸಲು ಉಪಕರಣಗಳನ್ನು ಅಳವಡಿಸುವ ಕೆಲಸವನ್ನು ಹಣಕಾಸಿನ ಕೊರತೆಯಿಂದ ಪೂರೈಸಿರಲಿಲ್ಲ. ಆದರೆ ಪಶ್ಚಿಮ ಘಟ್ಟದ ಸಮಗ್ರ ಅಭಿವೃದ್ಧಿ ಯೋಜನೆಯಲ್ಲಿ ಅರಣ್ಯ ರಕ್ಷಣಾ ಕೆಲಸಕ್ಕೆ ಹಣವಿದ್ದುದರಿಂದ ಚಿಕ್ಕಮಗಳೂರು ವಿಭಾಗದಲ್ಲಿ ಈ ಉಪಕರಣಗಳನ್ನು ಅಳವಡಿಸಲಾಗಿದೆ.

ಆ) ಉದ್ಭವಿಸುವುದಿಲ್ಲ.

ಇ) ಈ ನಿಸ್ತಂತು ಉಪಕರಣಗಳು ಶೃಷ್ಟಿದಾಯಕವಾಗಿ ಕಾರ್ಯ ನಿರ್ವಹಿಸುತ್ತಿವೆ. ಅದಕ್ಕೆ ತಗಲಿದ ವೆಚ್ಚವು ಅಂದರೆ ೯ ಉಪಕರಣಗಳು ಮತ್ತು ಬ್ಯಾಟರಿ ಕೇಬಲ್ ಇತ್ಯಾದಿ ನಿರ್ಮಾಣ ವೆಚ್ಚವು ಸೇರಿ ಈ ರೀತಿ ಇರುತ್ತದೆ.

೧)	೯ ಉಪಕರಣ	೧,೨೦,೫೪೮-೦೦
೨)	ಬ್ಯಾಟರಿ. ಕೇಬಲ್ ಮತ್ತು ನಿರ್ಮಾಣದ ವೆಚ್ಚ	೩೭,೨೬೭-೯೦
	ಒಟ್ಟು	೧,೫೭,೬೦೭-೯೦